



ಅರುಣ ಪಿ. ಭಟ್ಟ

# ವಾರಭವಿಷ್ಯ: 23.12.2021ರಿಂದ 29.12.2021ರವರೆಗೆ



**ಮೇಷ**

ಆರಂಭದ ಎರಡು ದಿನಗಳಲ್ಲಿ ಕಾರ್ಯಸಿದ್ಧಿ. ಬಂಧುಗಳ ಆಗಮನದಿಂದ ಕುಟುಂಬದಲ್ಲಿ ಸಂತಸ ಉಂಟಾಗುತ್ತದೆ. ಮನೆ ಬಾಡಿಗೆಯಿಂದ ಧನಲಾಭ ಪ್ರಾಪ್ತಿಯಾಗಲಿದೆ. ರಾಜಕೀಯದವರಿಗೆ ಕೈ ತಪ್ಪಿ ಹೋಗುವ ಅಧಿಕಾರ ಗಟ್ಟಿಯಾಗುತ್ತದೆ. ಗ್ರಂಥರಚನೆಯಲ್ಲಿ ಆಸಕ್ತಿ. ವಾಹನ ಸೌಖ್ಯ. ಮಕ್ಕಳಿಂದ ಮಾನಸಿಕ ಕಿರಿಕಿರಿ. ಬರತಕ್ಕ ಬಾಕಿ ಬರುವುದು. ಶುಭದಿನ 26. ಶ್ರೀ ಲಕ್ಷ್ಮೀನರಸಿಂಹ ಪಂಚರತ್ನ ಓದಿರಿ.



**ವೃಷಭ**

ವಾರದ ಪ್ರಾರಂಭದಲ್ಲಿ ಪ್ರವಾಸ ಮುಗಿಸಿಕೊಂಡು ಮರಳಿ ಮನೆಗೆ. ಸಹೋದರಿಯರಿಂದ ಶುಭವಾರ್ತೆ. ಹಸ್ತಾಲಂಕಾರ ವಸ್ತು ಖರಿದಿ. ವಾರ ಮಧ್ಯದಲ್ಲಿ ಜ್ವರ ಪೀಡೆಯಿಂದಾಗಿ ವೈದ್ಯಕೀಯ ಖರ್ಚು. ಕೋರ್ಟ್ ಪ್ರಕಣದಲ್ಲಿ ಗೆಲುವು ಸಾಧ್ಯತೆ. ಅವಮಾನಕರ ಪ್ರಸಂಗ. ವಿವಾಹ ಪ್ರಸ್ತಾವದಲ್ಲಿ ಯಶಸ್ಸು ಸಿಗಲಿದೆ. ವಾರಾಂತ್ಯದಲ್ಲಿ ಪರೋಪಕಾರ. ಶುಭದಿನ 25. ಈಶ್ವರನಿಗೆ ತಿಲಾರ್ಚನೆ ಮಾಡಿರಿ.



**ಮಿಥುನ**

ದೈಹಿಕ ಜಾಡ್ಯ ಅಲರ್ಜಿ. ವಿನಾಕಾರಣ ಹೆದರಿಕೆಯನ್ನು ಅನುಭವಿಸುತ್ತೀರಿ. ಆದರೆ ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷದ ಸಮಾರಂಭ. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶಸ್ಸು. ಉತ್ತಮ ಸಂಭಾಷಣೆಯನ್ನು ಪ್ರದರ್ಶನ ಮಾಡಲಿದ್ದೀರಿ. ಮಾನ–ಸನ್ಮಾನ ಮೂತ್ರ ಜನಕಾಂಗ ಪೀಡೆ ಕಾಡುವ ಸಾಧ್ಯತೆ ಇದೆ. ಶುಭದಿನ 24. ಕಾರ್ತಿಕೇಯ ಸ್ತೋತ್ರ ಪಠಣ ಮಾಡಿರಿ.



**ಕಟಕ**

ವಾರದ ಪ್ರಾರಂಭದಲ್ಲಿ ಮನೆಕಟ್ಟುವ ಸಮಸ್ಯೆ ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವ ಇದೆ ಜಾಗ್ರತೆಯಿಂದ ವ್ಯವಹರಿಸಬೇಕು. ವಾರವಿಡೀ ಒಂದಿಲ್ಲೊಂದು ವಿವಾದದಲ್ಲಿ ಸಿಲುಕುವ ಅಪಾಯ ಇದೆ. ತಂದೆಯಿಂದ ಹಣಕಾಸಿನ ಸಹಾಯ ಸಾಧ್ಯತೆ. ಕಾಲಿನ ನೋವು, ಆಸ್ಪತ್ರೆಗೆ ಖರ್ಚು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶುಭದಿನ 24. ಗುರುದತ್ತಾತ್ರೆಯ ಆರಾಧನೆ ಮಾಡಿರಿ.



**ಸಿಂಹ**

ಶಾರೀರಿಕ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರಕಾರಿ ಕೆಲಸಗಳು ತ್ವರಿತ ಗತಿಯಲ್ಲಿ ನಡೆಯುವುದು. ಪರಿಚಿತ ಮಹಿಳೆಯ ವಿರೋಧವನ್ನು ಎದುರಿಸಬೇಕಾಗಬಹುದು. ಪಶುಗಳ ವಿಕ್ರಿಯದಾರರಿಗೆ ಲಾಭ. ಹೊಟ್ಟೆನೋವಿನ ಫಜೀತಿ ಅನುಭವಿಸುವ ಪ್ರಸಂಗ. ಅಜ್ಞಾತವಾಸದಿಂದ ಬಿಡುಗಡೆ ಆಗಲಿದ್ದೀರಿ. ಕುಟುಂಬದಲ್ಲಿ ಮಹತ್ವದ ಮಾತುಕತೆ. ಶುಭದಿನ 27. ಹನುಮಾನ್ ಚಾಲೀಸ್ ಪಠಿಸಿರಿ.



**ಕನ್ಯಾ**

ಅನಿರೀಕ್ಷಿತ ಖರ್ಚಿನ ಪ್ರಸಂಗ ಬರಲಿದೆ. ಸರಕಾರಿ ಕೆಲಸದಲ್ಲಿ ವ್ಯತ್ಯಯ ಉಂಟಾಗಿ ಕಿರಿಕಿರಿ ಆಗುತ್ತದೆ. ನಿಮ್ಮ ಖಾಸಗಿ ಸೇವಕರಿಂದ ಹಾನಿ, ತೊಂದರೆ ಆಗುತ್ತದೆ. ಬಂಧುಗಳಿಗೆ ಆಪತ್ತು ಎದುರಾಗಬಹುದು. ಮನೆಕೆಲಸ ಅರ್ಧಕ್ಕೆ ನಿಲ್ಲುವುದು. ಪ್ರೇಮ ಪ್ರಸಂಗಗಳಲ್ಲಿ ಭಗ್ನತೆ. ಅಧಿಕಾರವನ್ನು ನಿರ್ವಹಿಸುವವರಿಗೆ ಹಿನ್ನಡೆ ಆಗಲಿದೆ. ಶುಭದಿನ 26. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.



**ತುಲಾ**

ವಾರದಲ್ಲಿಯೇ ಉತ್ತಮ ಫಲ ಪ್ರಾಪ್ತಿಯ ರಾಶಿ. ಆಕಸ್ಮಿಕ ಧನಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದು. ಸಂತತಿ ಇಲ್ಲದವರಿಗೆ ಸಂತತಿ ಭಾಗ್ಯದ ಮನ್ಸೂಚನೆ ಲಭ್ಯ. ವಿವಾಹಾಪೇಕ್ಷಿಗಳಿಗೆ ಸಂಗಾತಿ ಹೊಂದಾಣಿಕೆ ಆಗುತ್ತದೆ. ಮನೆಕೆಲಸದ ಹೊಸ ಸೇವಕರು ಸಿಗುತ್ತಾರೆ. ವ್ಯಾಪಾರದಲ್ಲಿ ಉತ್ತಮ ಲಾಭ. ಕುಟುಂಬದಲ್ಲಿ ಸೌಖ್ಯ. ಶುಭದಿನ 24. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.



**ವೃಶ್ಚಿಕ**

ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು ಸಂತಸವನ್ನು ಉಂಟುಮಾಡುತ್ತದೆ. ಪರದೇಶ ಪ್ರವಾಸಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳಲಿದ್ದೀರಿ. ಉದ್ಯೋಗ ನಿರೀಕ್ಷೆಯಲ್ಲಿರುವವರಿಗೆ ಸರಕಾರಿ ಅಧಿಕಾರ ಪ್ರಾಪ್ತಿಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಆಗುವ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ. ಪ್ರಾಣಾಪಾಯದ ಭೀತಿ. ಶುಭದಿನ 25. ದುರ್ಗಾ ಆರಾಧನೆ ಮಾಡಿರಿ.



**ಧನಸ್ಸು**

ಆರೋಗ್ಯದಲ್ಲಿ ಏರುಪೇರು. ಹೆಂಡತಿಯೊಡನೆ ಜಗಳ. ಕಚೇರಿಯ ಕಾಗದ ಪತ್ರಗಳು ಹಟಾತ್ ಕಾಣೆಯಾಗಬಹುದು. ದೂರದಿಂದ ಅಶುಭವಾರ್ತೆ ಬರುವುದು. ದೈನಂದಿನ ಕೆಲಸಗಳು ಸರಾಗವಾಗಿ ನಡೆಯುತ್ತವೆ. ದಿಢೀರೆಂದು ಹಿರಿಯ ಅಧಿಕಾರಿಗಳ ಆಗಮನ. ಮಹಿಳೆಯರ ಮೂಲಕ ದ್ರವ್ಯ ಲಾಭ. ದೇವತಾ ಪೂಜೆ ನಡೆಯುವುದು. ಶುಭದಿನ 28. ಗಣಪತಿಗೆ ದೂರ್ವಾರ್ಚನೆ ಮಾಡಿರಿ.



**ಮಕರ**

ಅಕಸ್ಮಾತ್ ಪೂರ್ವದಿಕ್ಕಿನಲ್ಲಿ ಅಪಘಾತ ಕಾಡುವ ಸಂಭವ ಇದೆ. ಕಾಲು ನೋವಿನ ಸಮಸ್ಯೆ ಉಂಟಾಗಬಹುದು. ಕೌಟುಂಬಿಕ ಖರ್ಚು ಜಾಸ್ತಿಯಾಗುವುದು. ಶತ್ರುಗಳು ತಲೆ ತಗ್ಗಿಸುವರು. ಹಳೆಯ ಮಿತ್ರರ ಆಗಮನದಿಂದ ಸಂತೋಷ. ಮಕ್ಕಳಿಂದ ಶುಭವಾರ್ತೆ ಬರಲಿದೆ. ದಾಂಪತ್ಯದಲ್ಲಿ ನೆಮ್ಮದಿ, ಸೌಖ್ಯ. ಹಣಕಾಸಿನ ಅಡಚಣೆ ನಿವಾರಣೆ. ಶುಭದಿನ 24. ನವಗ್ರಹ ಸ್ತೋತ್ರ ಮಾಡಿರಿ.



**ಕುಂಭ**

ಪ್ರಾರಂಭದಿಂದಲೂ ಶುಭಯೋಗ. ಯಾಂತ್ರಿಕ ವಸ್ತುಗಳ ಖರೀದಿ. ಶೈಕ್ಷಣಿಕ ಖಾತೆಯಲ್ಲಿ ಕೆಲಸದಲ್ಲಿರುವವರಿಗೆ ತಾತ್ಕಾಲಿಕ ಬಡ್ತಿ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಲ್ಲಿ ನೀರಿಕ್ಷೆಗಿಂತ ಲಾಭ. ಗುತ್ತಿಗೆದಾರರು ಉತ್ತಮ ಧನ ಲಾಭ ಕಾಣುವಿರಿ. ಮಿತ್ರರಿಂದ ವಂಚನೆ ಸಂಭವ. ಮಕ್ಕಳ ಅನಾರೋಗ್ಯ. ಶುಭದಿನ 23. ನಾಗಫಣಿ ಪೂಜೆ ಕ್ಷೀರಾಭಿಷೇಕ ಮಾಡಿರಿ.



**ಮೀನ**

ವಿನಾಕಾರಣ ಮಿತ್ರರು ಶತ್ರುಗಳಾಗುವರು. ಮೇಲಧಿಕಾರಿಗಳಿಂದ ಭಯದ ನೋಟಿಸು ಬರಬಹುದು. ಕಲಾವಿದರಿಗೆ ಸಂಗೀತಗಾರರಿಗೆ ವಾರದ ಮೊದಲರ್ಧ ಉತ್ತಮ. ಸೊಂಟನೊವು ಕಾಣಿಸುವುದು. ಮಕ್ಕಳ ಆರೋಗ್ಯದಲ್ಲಿ ಕೊಂಚ ಪ್ರಗತಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹಿನ್ನಡೆ. ವಾಹನ ಚಾಲಕರಿಗೆ ಎಚ್ಚರ ಅಗತ್ಯ. ಕೆಟ್ಟ ಜನರಿಂದ ಧನಪ್ರಾಪ್ತಿ. ಕುಟುಂಬ ಸೌಖ್ಯ. ಶುಭದಿನ 24. ಆದಿತ್ಯ ಹೃದಯ ಪಠಿಸಿರಿ.